
ಸಂದೀಪ ನಾಯಕ




**ಶ್ರಾವಣ ಪ್ರತಿಭೆ**
(ಅಂಬಿಕಾತನಯದತ್ತರ ಆಯ್ದ ನೂರು ಕವಿತೆಗಳ ಅರ್ಥವಿವೇಚನೆ)
ಆಯ್ಕೆ ಮತ್ತು ಅರ್ಥವಿವೇಚನೆ: ಕೀರ್ತಿನಾಥ ಕುರ್ತಕೋಟಿ, ವಾಮನ ಬೇಂದ್ರೆ
ಪು: 514 ಬೆ: ₹ 500
ಪ್ರ: ಮನೋಹರ ಗ್ರಂಥ ಮಾಲಾ
ಲಕ್ಷ್ಮಿ ಭವನ, ಸುಭಾಸ ರಸ್ತೆ,
ಧಾರವಾಡ 580 001

‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.

# ಬೇಂದ್ರೆ ಕಾವ್ಯದ ಹಲವು ದಿಕ್ಕುಗಳ ಪ್ರತಿಫಲನ

ಕನ್ನಡ ಕಾವ್ಯದ ಶ್ರೇಷ್ಠ ಕವಿ ದ.ರಾ. ಬೇಂದ್ರೆಯವರ ಆಯ್ದ 100 ಕವಿತೆಗಳಿಗೆ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿ ಮತ್ತು ವಾಮನ ಬೇಂದ್ರೆ ಬರೆದ ಅರ್ಥವಿವೇಚನೆಯ ಟಿಪ್ಪಣಿಗಳಿರುವ ‘ಶ್ರಾವಣ ಪ್ರತಿಭೆ’ ಸಂಪುಟ ಮರು ಮುದ್ರಣಗೊಂಡಿದೆ (ಮೊ. ಮು. 1987). ಬೇಂದ್ರೆಯವರ 30ಕ್ಕೂ ಹೆಚ್ಚು ಪ್ರಕಟಿತ ಕವನ ಸಂಗ್ರಹಗಳಿಂದ ಕವಿತೆಗಳನ್ನು ಆಯ್ಕೆ ಮಾಡಿ ಈ ಸಂಪುಟವನ್ನು ಸಿದ್ಧಗೊಳಿಸಲಾಗಿತ್ತು. ಈ ಸಂಪುಟವು ಮನೋಹರ ಗ್ರಂಥಮಾಲೆಯ 50ನೇ ವರ್ಷದ ನೆನಪಿಗೆ ಪ್ರಕಟವಾದ ‘ಪುಟ ಬಂಗಾರ’ದ ಐದು ಸಂಪುಟಗಳಲ್ಲಿ ಕೊನೆಯದಾಗಿತ್ತು.

ಕವಿತೆಗಳ ಅರ್ಥವಿವೇಚನೆಯ ಜೊತೆಗೆ ಬೇಂದ್ರೆಯವರೇ ಬರೆದ ಅವರ ಆತ್ಮಕತೆಯ ಕೆಲವು ಪುಟಗಳು ಮತ್ತು ವಾಮನ ಬೇಂದ್ರೆಯವರು ಬರೆದ ಈ ಆತ್ಮಕತೆಯ ಉತ್ತರಾರ್ಧ ಈ ಪುಸ್ತಕದ ಅನುಬಂಧದಲ್ಲಿ ಸೇರಿವೆ. ಇವುಗಳ ಜೊತೆಗೆ ಬೇಂದ್ರೆಯವರ ಸಾಮ ಛಂದಸ್ಸು, ಬೇಂದ್ರೆಯವರ ಸಾಂಖ್ಯ ವಿಜ್ಞಾನದ ಬಗ್ಗೆ ವಾಮನ ಬೇಂದ್ರೆಯವರು ಬರೆದ ಲೇಖನಗಳಿವೆ.

‘ಯುಗಾದಿ’, ‘ಬೆಳಗು’, ‘ಚಿಗರಿಗಂಗಳ ಚೆಲುವಿ’, ‘ಬೆಳಗು’, ‘ಸಣ್ಣ ಸೋಮವಾರ’, ‘ಜೋಗಿ’, ‘ಕಲ್ಪವೃಕ್ಷ ವೃಂದಾವನಂಗಳಲಿ’, ‘ಮೀನಕೇತು’, ‘ಏಳು ಕನ್ನಿಕೆಯರು’, ‘ನೃತ್ಯಯಜ್ಞ’, ‘ಗಂಗಾವತರಣ’, ‘ಕರಡಿ ಕುಣಿತ’, ‘ಪಾತರಗಿತ್ತಿ ಪಕ್ಕ’